# ಸಂದೇಶದ ಹಿನ್ನುಡಿ

## ಲಯದ ನಂತರದ ಪಯಣ:

## ಜಲವು ತಾನು ಜಲಜನಕವಾಗಿದ್ದೆನೆಂದು ಮರೆತಾಗ



ಪೂಜ್ಯ ದಾಜಿಯವರ

70ನೆಯ ಜನ್ಮದಿನದ ಸಂದರ್ಭದಲ್ಲಿ ನೀಡಿದ ಸಂದೇಶದ ಹಿನ್ನುಡಿ

ಸೆಪ್ಟೆಂಬರ್ 28, 2025, ಕಾನ್ಹಾ ಶಾಂತಿ ವನಂ



## ಸಂದೇಶದ ಹಿನ್ನುಡಿ

# ಲಯದ ನಂತರದ ಪಯಣ:

## ಜಲವು ತಾನು ಜಲಜನಕವಾಗಿದ್ದೆನೆಂದು ಮರೆತಾಗ

ಪ್ರಿಯರೆ,

ಆಧ್ಯಾತ್ಮಿಕ ಪಯಣವು ಮೂಲ ವಿರೋಧಾಭಾಸವೊಂದನ್ನು ನಮ್ಮ ಮುಂದಿಡುತ್ತದೆ: ಅಂತಿಮ ಗುರಿಯೆಂದು ನಾವು ತಿಳಿದುಕೊಂಡದ್ದು, ವಾಸ್ತವದಲ್ಲಿ ನಿಜವಾದ ಪ್ರಗತಿಯ ಆರಂಭವಾಗಿದೆ. 2025ರ ಸೆಪ್ಟೆಂಬರ್ ಭಂಡಾರ ಸಂದೇಶದ ತಿರುಳಾಗಿದ್ದ ಈ ಒಳನೋಟವು, ಪ್ರಗತಿ, ಯಶಸ್ಸು ಹಾಗು ಆಧ್ಯಾತ್ಮಿಕ ಸಾಕ್ಷಾತ್ಕಾರದ ಸ್ವರೂಪದ ಬಗೆಗಿನ ನಮ್ಮ ಮೂಲಕಲ್ಪನೆಗಳನ್ನು ಮರುಪರಿಶೀಲಿಸಲು ಉತ್ತೇಜಿಸುತ್ತದೆ.

ನಮ್ಮ ಸುತ್ತಣ ಜಗತ್ತಿನ ಜನರಿಗೆ ಮುಕ್ತಾಯಗಳ ಬಗ್ಗೆ ಅತೀವ ವ್ಯಾಮೋಹವಿದೆ. ಪದವಿ, ನಿವೃತ್ತಿ ಮತ್ತು ಸಾಕ್ಷಾತ್ಕಾರವನ್ನು ನಾವು ಕೊನೆಯ ಮಜಲುಗಳೆಂದು

ತಿಳಿದು ವರ್ತಿಸುತ್ತೇವೆ. ಆದರೆ ಪ್ರಕೃತಿ ನಮಗೆ ತೋರಿಸಿಕೊಡುವುದು ಬೇರೆಯದನ್ನೇ. ಕತ್ತಲಲ್ಲಿ ತೊಳಲಿ, ಬಳಲಿ, ಮಣ್ಣನ್ನು ಭೇದಿಸಿಕೊಂಡು ಹೊರಬರುವ ಬೀಜದ ಪಯಣ ಮುಗಿಯಿತೆ? ಇಲ್ಲ, ಅದು ಕೇವಲ ಆರಂಭವಷ್ಟೆ. ಭೇದಿಸುವುದು ಗುರಿಯಲ್ಲ; ದ್ಯುತಿಸಂಶ್ಲೇಷಣೆ, ಬೆಳವಣಿಗೆ, ಹಣ್ಣು ಬಿಡುವುದು, ನೆರಳು ನೀಡುವುದು ಹಾಗು ಕೊನೆಯಲ್ಲಿ ಹೊಸ ಬೀಜಗಳಿಗಾಗಿ ಮಣ್ಣಾಗುವುದು, ಇತ್ಯಾದಿಯಾಗಿ ಎಲ್ಲ ಪ್ರಮುಖ ಹಂತಗಳಿಗೂ ಅದು ಮೊದಲ ಹೆಜ್ಜೆ.

ಕತ್ತಲಲ್ಲಿ ತೊಳಲಿ, ಬಳಲಿ, ಮಣ್ಣನ್ನು ಭೇದಿಸಿಕೊಂಡು ಹೊರಬರುವ ಬೀಜದ ಪಯಣ ಮುಗಿಯಿತೆ? ಇಲ್ಲ, ಅದು ಕೇವಲ ಆರಂಭವಷ್ಟೆ. ಭೇದಿಸುವುದು ಗುರಿಯಲ್ಲ; ದ್ಯುತಿಸಂಶ್ಲೇಷಣೆ, ಬೆಳವಣಿಗೆ, ಹಣ್ಣು ಬಿಡುವುದು, ನೆರಳು ನೀಡುವುದು ಹಾಗು ಕೊನೆಯಲ್ಲಿ ಹೊಸ ಬೀಜಗಳಿಗಾಗಿ ಮಣ್ಣಾಗುವುದು, ಇತ್ಯಾದಿಯಾಗಿ ಎಲ್ಲ ಪ್ರಮುಖ ಹಂತಗಳಿಗೂ ಅದು ಮೊದಲ ಹೆಜ್ಜೆ.

ಲಯವು ನಿಮ್ಮ ಆರಂಭವೆಂದು ಬಾಬೂಜಿಯವರು ಇದೇ ಅರ್ಥದಲ್ಲಿ ಹೇಳಿದ್ದರು. ಹನಿಯಾಗಿದ್ದುಕೊಂಡೇ ಸಾಗರವನ್ನು ಸೇರಿದೆನೆಂದು ಸಂಭ್ರಮಿಸುವ ಹನಿಯೊಂದು ನಿಜವಾಗಲೂ ಲಯ ಹೊಂದಿಲ್ಲ. ನಿಜವಾದ ಲಯವನ್ನು ಸಂಭ್ರಮಿಸಲು ಯಾರೂ ಉಳಿದಿರುವುದಿಲ್ಲ. ಇದೊಂದು ಬೃಹತ್ ವಿರೋಧಾಭಾಸ.

## ಬದಲಾವಣೆಯ ಹಿಂದಿನ ವಿಜ್ಞಾನ ಮತ್ತು ತತ್ತ್ವ

ರಸಾಯನಶಾಸ್ತ್ರದ ಘನವಾದ ಮೂಲಪಾಠವನ್ನು ತೆಗೆದುಕೊಳ್ಳಿ: ಜಲಜನಕ ಅಸ್ಥಿರ, ಅಪಾಯಕಾರಿ ಮತ್ತು ಚಂಚಲ; ಆಮ್ಲಜನಕ ಎಲ್ಲ ಬಗೆಯ

ಬೆಂಕಿಯನ್ನೂ ಹೊತ್ತಿಸಿ, ಎಲ್ಲವನ್ನೂ ಸುಟ್ಟುಹಾಕುತ್ತದೆ. ಆದಾಗ್ಯೂ, ಅವೆರಡೂ ಒಂದಾದಾಗ, ವಿನಾಶವನ್ನು ಪ್ರತಿನಿಧಿಸುತ್ತವೆಯೆ? ಅವು ಒಂದಾಗಿ, ಸಕಲ ಜೀವರಾಶಿಯನ್ನು ಪೋಷಿಸುವ ನೀರಾಗುತ್ತವೆ. ಆದರೆ ಗಹನ ಸತ್ಯ ಹೀಗಿದೆ: ನೀರಿಗೆ ತಾನು ಜಲಜನಕವಾಗಿದ್ದೆನೆಂದು ನೆನಪಿರದು. ಅದರ ಸ್ಫೋಟಕ ಸ್ವಭಾವವು ನಿಗ್ರಹಿಸಲ್ಪಟ್ಟ ಪ್ರವೃತ್ತಿಯಾಗಿಯೂ ಕೂಡ ಇರದು. ಅದರ ಪರಿವರ್ತನೆ ಎಷ್ಟು ಪರಿಪೂರ್ಣವಾಗಿರುವುದೆಂದರೆ, ಅದರ  ಮೂಲ ಪ್ರವೃತ್ತಿಯ ಸಾಧ್ಯತೆಯೆ ಇಲ್ಲವಾಗುತ್ತದೆ.

ನಾವು ಆಧ್ಯಾತ್ಮಿಕವಾಗಿ ಹೇಗೆ ಬೆಳೆಯುತ್ತೇವೆಂದು ಇದು ತೋರಿಸುತ್ತದೆ. ಸಾಮಾನ್ಯವಾಗಿ, ಹೊಸತನ್ನು ಕಲಿಯುವುದು ಅಥವಾ ಏನನ್ನೋ ಸುಧಾರಣೆ ಮಾಡಿಕೊಳ್ಳುವುದು ಹೀಗೆ ನಾವು ಆಧ್ಯಾತ್ಮಿಕ ಪ್ರಗತಿಯನ್ನು ನಮ್ಮ ವ್ಯಕ್ತಿತ್ವಕ್ಕೆ ಸೇರ್ಪಡೆಯೆಂದು ತಿಳಿದುಕೊಳ್ಳುತ್ತೇವೆ. ಆದರೆ ನಿಜವಾದ ಬದಲಾವಣೆ ರಸವಿದ್ಯೆ ಇದ್ದಂತೆ. ನಿಮ್ಮ ಅಹಂಕಾರ ವರ್ಧಿಸುವುದಿಲ್ಲ; ನೀವು ಬೇರೆಯದೇ ಉದ್ದೇಶ ಪೂರೈಸುವ, ಸಂಪೂರ್ಣ ಬೇರೆ ವ್ಯಕ್ತಿಯೇ ಆಗುತ್ತೀರಿ.

ಭಗವದ್ಗೀತೆಯು ಸ್ವಧರ್ಮವನ್ನು ಬೋಧಿಸುತ್ತದೆ, ಅಂದರೆ ನಿಮ್ಮ ಕರ್ತವ್ಯ ಅಥವಾ ಉದ್ದೇಶ. ಆದರೆ ಅತೀವ ಗಹನ ಬದಲಾವಣೆಯ ಕಾರಣ ನಿಮ್ಮ ಮೂಲ ಸ್ವಭಾವವೇ ಪರಿವರ್ತನೆಯಾದರೆ ಏನಾಗುತ್ತದೆ? ನೀರಿನ

ಸಾಮಾನ್ಯವಾಗಿ, ಹೊಸತನ್ನು ಕಲಿಯುವುದು ಅಥವಾ ಏನನ್ನೋ ಸುಧಾರಣೆ ಮಾಡಿಕೊಳ್ಳುವುದು ಹೀಗೆ ನಾವು ಆಧ್ಯಾತ್ಮಿಕ ಪ್ರಗತಿಯನ್ನು ನಮ್ಮ ವ್ಯಕ್ತಿತ್ವಕ್ಕೆ ಸೇರ್ಪಡೆಯೆಂದು ತಿಳಿದುಕೊಳ್ಳುತ್ತೇವೆ. ಆದರೆ ನಿಜವಾದ ಬದಲಾವಣೆ ರಸವಿದ್ಯೆ ಇದ್ದಂತೆ. ನಿಮ್ಮ ಅಹಂಕಾರ ವರ್ಧಿಸುವುದಿಲ್ಲ; ನೀವು ಬೇರೆಯದೇ ಉದ್ದೇಶ ಪೂರೈಸುವ, ಸಂಪೂರ್ಣ ಬೇರೆ ವ್ಯಕ್ತಿಯೇ ಆಗುತ್ತೀರಿ.

ಧರ್ಮವೂ, ಜಲಜನಕ ಮತ್ತು ಆಮ್ಲಜನಕಗಳ ಧರ್ಮವೂ ಸಮಾನವಾಗಿಲ್ಲ. ಪ್ರವಹಿಸುವುದು, ಪೋಷಿಸುವುದು, ಶುದ್ಧಗೊಳಿಸುವುದು ಮತ್ತು ಜೀವನವನ್ನು ಸುಸ್ಥಿರವಾಗಿಡುವುದೇ ಹೊಸ ಧರ್ಮ.

ಸಂದೇಶ: ನಾವು ಉತ್ತಮ ಹನಿಗಳಾಗುತ್ತಿಲ್ಲ. ನಮ್ಮ ನೈಜಸ್ವಭಾವವೆಂದಿಗೂ "ಹನಿಯಾಗಿರುವುದು" ಆಗಿಯೇ ಇರಲಿಲ್ಲ. ಮಹತ್ವಪೂರ್ಣವಾದ ಈ ಹೊಸ ತಿಳಿವಳಿಕೆಯೂ ನಿಜವಾದ ಕಾರ್ಯವನ್ನು ಕೈಗೆತ್ತಿಕೊಳ್ಳಲು ನಮ್ಮನ್ನು ಸಿದ್ಧಗೊಳಿಸುತ್ತದೆ, ಅಷ್ಟೆ.

ಇದರಿಂದ ನಮ್ಮ ದೈನಂದಿನ ಜೀವನದಲ್ಲಿ ಆಗುವ ಪರಿಣಾಮಗಳೇನು? ಮೊದಲಿಗೆ, ಸಮಸ್ಯೆಗಳು ಮತ್ತು ಸವಾಲುಗಳ ಬಗೆಗಿನ ನಮ್ಮ ಗ್ರಹಿಕೆಯನ್ನು ಇದು ಬದಲಾಯಿಸುತ್ತದೆ. ಅರಿವು ಪಡೆದವರು ತಮ್ಮ ಪಯಣದಲ್ಲಿ ವಾಹನದಟ್ಟಣೆಯನ್ನು ಸಮಸ್ಯೆಯೆಂದು ಪರಿಗಣಿಸುವುದಿಲ್ಲ. ಅವರು ತಮ್ಮನ್ನು ಹರಿವಿನ ಭಾಗವೆಂದು ಪರಿಗಣಿಸುತ್ತಾರೆ, ಇದು ಅವರ ಪ್ರತಿಕ್ರಿಯೆಯನ್ನು ಪ್ರಭಾವಿಸುತ್ತದೆ. ಅವರು ಹೊಸ ದಾರಿಯನ್ನು ಕಂಡುಕೊಳ್ಳಬಹುದು; ಅದಕ್ಕೆ ಕಾರಣ, "ನನಗೆ ಬೇಗನೆ ತಲುಪಬೇಕಿದೆ" ಎಂದಲ್ಲ. ಬದಲಾಗಿ, ಒಟ್ಟಾರೆ ಹರಿವಿಗೆ ಲಾಭದಾಯಕವಾಗುತ್ತದೆ ಎಂಬ ಕಾರಣಕ್ಕಾಗಿ.

ಈ ತಿಳಿವಳಿಕೆಯಿಂದ ಸಂಬಂಧಗಳಲ್ಲಿ ಎಲ್ಲವೂ ಬದಲಾಗುತ್ತವೆ. ಬಹುತೇಕ ಸಂದರ್ಭಗಳಲ್ಲಿ, ಎರಡು ಹನಿಗಳು ತಾವು ಜೊತೆಯಲ್ಲಿರಬೇಕು ಎಂದು ಹೇಳುತ್ತಲೇ ಪರಸ್ಪರ ದೂರವಿರಲು ಪ್ರಯತ್ನಿಸಿದಾಗ ಕಲಹವುಂಟಾಗುತ್ತದೆ. ತಾವೆಂದಿಗೂ ಅದೇ ನೀರಿನ ಅಭಿವ್ಯಕ್ತಿಯಾಗಿದ್ದೆವು, ಪ್ರತ್ಯೇಕ ಹನಿಗಳಾಗಿರಲೇ ಇಲ್ಲ ಎಂದು ಇಬ್ಬರಿಗೂ ಅರಿವಾದ ನಂತರ ಅವರು ಪ್ರತ್ಯೇಕವಾಗಿರುವುದಿಲ್ಲ. ವೈದಿಕ ಸಂಪ್ರದಾಯದಲ್ಲಿ ಪ್ರಯತ್ನ ಮತ್ತು ಪ್ರಸಾದದ (ಕೃಪೆ) ಬಗ್ಗೆ ಹೇಳಲಾಗಿದೆ. ಲಯಕ್ಕೂ ಮೊದಲು ನಾವು ಸಾಗರವಾಗಲು ಪ್ರಯತ್ನಿಸುತ್ತೇವೆ. ಲಯದ ನಂತರ, ನಾವು ಹನಿಯೆಂದು ಸೋಗು ಹಾಕಿದ್ದ ಸಾಗರವೇ ಆಗಿದ್ದೆವೆಂದು ಅರಿತುಕೊಳ್ಳುತ್ತೇವೆ. ಆದರೆ ಆಗ ಬರುವ ಅತಿ ದೊಡ್ಡ

ಸವಾಲೆಂದರೆ, ನಾವು ಸಾಗರವಾಗಿದ್ದೆವೆಂದು ತಿಳಿದೂ ಹನಿಯಾಗಿರಲು ಆಯ್ಕೆ ಮಾಡಿಕೊಳ್ಳುವುದು. ಇದು ಒಗಟುಗಳಿಂದ ತುಂಬಿದ ವಿರೋಧಾಭಾಸ. ಇದೇ ಕಾರಣಕ್ಕಾಗಿ, ಬಾಬೂಜಿಯವರು ಇದನ್ನು ಆರಂಭವೆಂದು ಹೇಳುತ್ತಾರೆ. ನಟನೊಬ್ಬನು ತನ್ನ ಪಾತ್ರದಲ್ಲಿ ಮುಳುಗಿಹೋಗಬಹುದು, ಆದರೆ ತಾನು ನಟಿಸುತ್ತಿದ್ದೇನೆಂದು ತಿಳಿದೂ ಪಾತ್ರವನ್ನು ಪರಿಪೂರ್ಣವಾಗಿ ನಿಭಾಯಿಸಲು ಸಾಧ್ಯವೆ? ಸಂಪೂರ್ಣವಾಗಿ ಮಾನವನಾಗಿದ್ದೂ, ನೀವು ದೈವವೆಂದು ತಿಳಿದಿರಲು ಸಾಧ್ಯವೆ?ಅಸೀಮವಾಗಿದ್ದೂ, ದೇಹವೆಷ್ಟು ಸೀಮಿತವೆಂದು ಅರಿಯಲು ಸಾಧ್ಯವೆ?

## ಪರಿಮಿತಗೊಳಿಸುವ ವಿವೇಕ

ನಿಜ ಜೀವನದಲ್ಲಿ ತತ್ತ್ವಜ್ಞಾನದ ಅನುಷ್ಠಾನ ಇಲ್ಲಿಂದಲೇ ಆರಂಭವಾಗುವುದು. ನೀರು ತನ್ನ ಧಾರಕದ ಆಕಾರ ತಾಳುತ್ತದೆ, ಅದಕ್ಕೆ ಆಕಾರ ನೀಡಲು ಬರುವುದಿಲ್ಲವೆಂದಲ್ಲ, ಅದೇಕೆಂದರೆ ನಿರಾಕಾರದಿಂದ ಪ್ರಯೋಜನವಿಲ್ಲ. ಬಟ್ಟಲಿನಲ್ಲಿರುವ ನೀರನ್ನು ಕುಡಿಯಬಹುದು. ಮೋಡಗಳಲ್ಲಿ ಅದು ಮಳೆಯಾಗುತ್ತದೆ. ರಕ್ತನಾಳಗಳಲ್ಲಿ ಅದು ಜೀವದ್ರವವಾಗುತ್ತದೆ. ಅಂತೆಯೆ, ಬದಲಾಗುವ ಸಾಮರ್ಥ್ಯವೇ ನಮ್ಮನ್ನು ಸಶಕ್ತರನ್ನಾಗಿಸುತ್ತದೆ.

ಬದಲಾಗುವ ಸಾಮರ್ಥ್ಯವೇ ನಮ್ಮನ್ನು ಸಶಕ್ತರನ್ನಾಗಿಸುತ್ತದೆ.

ಲಯದ ನಂತರ, ಪರಿಮಿತಿಗಳನ್ನು ಅನುಸರಿಸಬೇಕಾದ ನಿಯಮಗಳೆಂದು ಪರಿಗಣಿಸದೆ, ಸೃಜನಾತ್ಮಕ ಆಯ್ಕೆಗಳಂತೆ ನೋಡುವುದನ್ನು ಕಲಿಯುವುದೇ ಪಯಣ. ನಿಮ್ಮ ಪ್ರಸ್ತುತ ಜೀವನದ ಆಕಾರವನ್ನು ನೀವು ಆಯ್ದುಕೊಂಡಿರುವುದು ಅನಿವಾರ್ಯತೆಯಿಂದಲ್ಲ, ಅದು ಮಹದೋದ್ದೇಶಕ್ಕೆ ಶ್ರುತಿಗೂಡುವುದೆಂದು.

ಲಯದ ನಂತರ, ಪರಿಮಿತಿಗಳನ್ನು ಅನುಸರಿಸಬೇಕಾದ ನಿಯಮಗಳೆಂದು ಪರಿಗಣಿಸದೆ, ಸೃಜನಾತ್ಮಕ ಆಯ್ಕೆಗಳಂತೆ ನೋಡುವುದನ್ನು ಕಲಿಯುವುದೇ ಪಯಣ. ನಿಮ್ಮ ಪ್ರಸ್ತುತ ಜೀವನದ ಆಕಾರವನ್ನು ನೀವು ಆಯ್ದುಕೊಂಡಿರುವುದು ಅನಿವಾರ್ಯತೆಯಿಂದಲ್ಲ, ಅದು ಮಹದೋದ್ದೇಶಕ್ಕೆ ಶ್ರುತಿಗೂಡುವುದೆಂದು.

“ನಾನು ಲಯ ಹೊಂದಿದ್ದೇನೆ” ಎಂದು ಘೋಷಿಸುವ ಆಧ್ಯಾತ್ಮಿಕ ಅಹಂಕಾರವು, ಅತ್ಯಂತ ಅಪಾಯಕಾರಿ ಬಲೆ. ಅದು, ಜಲಜನಕವಾಗಿಯೆ ಇದ್ದು ನೀರಿನಂತೆ ಸೋಗುಹಾಕುವ ಜಲಜನಕ. ನಿಜವಾದ ನೀರಿಗೆ ತಾನೇನೆಂದು ಹೇಳುವ ಅಗತ್ಯವಿಲ್ಲ. ಅದು ಕೇವಲ ಹರಿಯುತ್ತದೆ, ಪೋಷಿಸುತ್ತದೆ ಮತ್ತು ಶುದ್ಧಗೊಳಿಸುತ್ತದೆ. ಅದರ ಅಸ್ತಿತ್ವವೇ ಅದರ ಉದ್ಘೋಷಣೆ.

ಈ ತಿಳಿವಳಿಕೆ ನಮ್ಮನ್ನು ಅತಿ ಆಧ್ಯಾತ್ಮಿಕರಾಗಿ ದಣಿದುಕೊಳ್ಳುವ ಕೆಲಸದಿಂದ ಮುಕ್ತರನ್ನಾಗಿಸುತ್ತದೆ. ನೀವು ಸರ್ವಜ್ಞರಂತೆ ತೋರಿಸಿಕೊಳ್ಳುವ ಅಗತ್ಯವಿಲ್ಲ. ಅಸಾಮಾನ್ಯ ರೀತಿಯಲ್ಲಿ ಮಾತನಾಡುವ ಅಗತ್ಯವಿಲ್ಲ. ನೀವು, ಆ ಕ್ಷಣದ ಅಗತ್ಯವನ್ನು ಪೂರೈಸಲು ಸದಾ ಲಭ್ಯವಿರುವ, ನೆರವಾಗುವ ಹಾಗು ಹೊಂದಿಕೊಳ್ಳುವ ನೀರಿನಂತಿದ್ದರೆ ಸಾಕು.

## ಕೊನೆಯಿಲ್ಲದ ಸೇವೆ

ಗಣಿತಜ್ಞರು, ಉಳಿದುದೆಲ್ಲವನ್ನು ಅಡಕ ಮಾಡಿಕೊಂಡು ವಿಭಿನ್ನವಾಗಿರುವ ಅನೇಕ ಅನಂತಗಳನ್ನು ಕಂಡುಹಿಡಿದಾಗ, ಅವರೊಂದು ಆಧ್ಯಾತ್ಮಿಕ ಸತ್ಯವನ್ನು ಕಂಡುಕೊಂಡರು. ಲಯದ ನಂತರದ ಪಯಣ ಮತ್ತಷ್ಟು ವಿಸ್ತರಿಸುವುದಾಗಿರದೆ, ಪರಿಮಿತಿಯೊಳಗಿದ್ದು ಸೇವೆ ಸಲ್ಲಿಸುವ ಅನಂತ ಮಾರ್ಗಗಳ ಬಗೆಗಾಗಿರುತ್ತದೆ.

ತನ್ನ ಮಗುವಿಗೆ ಉಣಿಸುವ ತಾಯಿ ಅದನ್ನು ಕರಾರುವಾಕ್ಕಾಗಿ ಮಾಡುವುದನ್ನು ಕಾಣುತ್ತೇವೆ. ಜೀವವೊಂದನ್ನು ನೋಡಿಕೊಳ್ಳಲು ಆಕೆಗೆ ಜಗತ್ತಿನ ಬಗ್ಗೆ ಅರಿವಿರುವ ಅಗತ್ಯವಿಲ್ಲ. ವ್ಯಕ್ತಿಯಾಗಿರುವ ಆಕೆ ಒಬ್ಬ ತಾಯಿಯಾಗುವ ಬದಲಾವಣೆಯು ಆವಶ್ಯಕತೆಗೆ ತಕ್ಕಂತೆ ಸಂಪೂರ್ಣ ಹಾಗು ಪರಿಪೂರ್ಣವಾಗಿದೆ. ಆದರೆ ಈ ಇತಿಮಿತಿ ಯ ಹೊರತಾಗಿಯೂ ಆಕೆ ಪ್ರೇಮದ ಅಪರಿಮಿತತೆಯನ್ನು ಮುಟ್ಟುತ್ತಾಳೆ.

ಆಧ್ಯಾತ್ಮಿಕ ಸಾಧನೆಯನ್ನು ನಾವು ಅನುಸರಿಸುವ ಬಗೆಯನ್ನು ಈ ಪಾಠ ಬದಲಾಯಿಸುತ್ತದೆ. ನಾವು ಅಸಾಧಾರಣ ಅನುಭವಗಳನ್ನು ಹುಡುಕುವ ಬದಲು ನಿತ್ಯ ಬದುಕಿನಲ್ಲಿರುವ ಗಹನತೆಯನ್ನು ಕಂಡುಕೊಳ್ಳುವುದನ್ನು ಕಲಿಯುತ್ತೇವೆ. ವಿಷಯಗಳು ಹೇಗೆ ವಿಕಸನಗೊಳ್ಳುತ್ತವೆಂದು ಪಾತ್ರೆ ತೊಳೆಯುವುದು ಕಲಿಸುತ್ತದೆ. ಮುಖ್ಯವಾದುದನ್ನು ವಿನಿಮಯ ಮಾಡಿಕೊಳ್ಳುವುದು ಹೇಗೆಂದು ಉಸಿರಾಟ ತೋರಿಸಿಕೊಡುತ್ತದೆ. ಪ್ರತಿಬಾರಿಯೂ ನಾವು ಯಾರೊಂದಿಗಾದರೂ ಮಾತನಾಡಿದಾಗ, ಪ್ರೇಮದ ಹೆಸರಿನಲ್ಲಿ ಪ್ರಜ್ಞಾಪೂರ್ವಕ ಮಿತಿಯನ್ನು ಅಭ್ಯಾಸ ಮಾಡುವ ಅವಕಾಶವಿದೆ.
ಅಪರಿಮಿತವಾಗಿರುವುದು ನಮಗೆ ಹೆಚ್ಚಿನ ಸ್ವಾತಂತ್ರ್ಯವನ್ನು ನೀಡದು. ಇದು ನೀರು ತಾನು ಘನವಾಗಿರಲು ಮಂಜುಗಡ್ಡೆಯಾಗಿ, ಮೇಲೆ ಸಾಗಲು ಆವಿಯಾಗಿ ಹಾಗು ಹರಿಯಲು ದ್ರವವಾಗಿಯೆ ಇರಲು ಆಯ್ದುಕೊಂಡಂತೆ.

ಲಯದ ನಂತರದ ಪಯಣ ಮತ್ತಷ್ಟು ವಿಸ್ತರಿಸುವುದಾಗಿರದೆ, ಪರಿಮಿತಿಯೊಳಗಿದ್ದು ಸೇವೆ ಸಲ್ಲಿಸುವ ಅನಂತ ಮಾರ್ಗಗಳ ಬಗೆಗಾಗಿರುತ್ತದೆ.

ಅಪರಿಮಿತವಾಗಿರುವುದು ನಮಗೆ ಹೆಚ್ಚಿನ ಸ್ವಾತಂತ್ರ್ಯವನ್ನು ನೀಡದು. ಇದು ನೀರು ತಾನು ಘನವಾಗಿರಲು ಮಂಜುಗಡ್ಡೆಯಾಗಿ, ಮೇಲೆ ಸಾಗಲು ಆವಿಯಾಗಿ ಹಾಗು ಹರಿಯಲು ದ್ರವವಾಗಿಯೆ ಇರಲು ಆಯ್ದುಕೊಂಡಂತೆ. ಪ್ರತಿಯೊಂದು ಸ್ಥಿತಿಯೂ ಪರಿಪೂರ್ಣವಾಗಿದ್ದು, ಅಗತ್ಯವಿರುವಾಗ ಪರಸ್ಪರ ಬದಲಾವಣೆಗಳು ಸಹಜವಾಗಿಯೆ ಆಗುತ್ತವೆಯೆ ಹೊರತು, ಪ್ರಸ್ತುತ ಸ್ಥಿತಿ ಜನರಿಗೆ ಇಷ್ಟವಿಲ್ಲವೆಂದಲ್ಲ.

ಪ್ರತಿಯೊಂದು ಸ್ಥಿತಿಯೂ ಪರಿಪೂರ್ಣವಾಗಿದ್ದು, ಅಗತ್ಯವಿರುವಾಗ ಪರಸ್ಪರ ಬದಲಾವಣೆಗಳು ಸಹಜವಾಗಿಯೆ ಆಗುತ್ತವೆಯೆ ಹೊರತು, ಪ್ರಸ್ತುತ ಸ್ಥಿತಿ ಜನರಿಗೆ ಇಷ್ಟವಿಲ್ಲವೆಂದಲ್ಲ. ಇದೇ ಪ್ರಾಯಶಃ ನಿಜವಾದ ಸ್ವಾತಂತ್ರ್ಯ.

ಜೀವನ ಸಂದೇಶ: ನಿಮ್ಮ ದಿನನಿತ್ಯದ ಜೀವನದಲ್ಲಿ, ನೀವು ಸಾಗರವಾಗಲು ಪ್ರಯತ್ನಿಸುತ್ತಿಲ್ಲವೆಂದು ನೆನಪಿಡಿ. ಈ ಕ್ಷಣದಲ್ಲಿ, ನೀರು ಯಾವ ರೀತಿ ಕೆಲಸ ಮಾಡುವುದೊ ಅದೇ ಬಗೆಯಲ್ಲಿಯೆ ನೀವು ನೀರಾಗಿರಲು ಕಲಿಯುತ್ತಿದ್ದೀರಿ. ನೀವು ನೀರು ಕುಡಿಯುವಾಗ, ಜೀವನಕ್ಕೆ ನೆರವಾಗಲು ತಮ್ಮ ಜೀವನಗಳನ್ನೇ ತ್ಯಾಗಮಾಡಿದ ಜಲಜನಕ ಮತ್ತು ಆಮ್ಲಜನಕಗಳ ಬಗ್ಗೆ ಆಲೋಚಿಸಿರಿ.

ನಿಮಗೆ ಸಮಸ್ಯೆ ಬಂದಾಗ ನೀವು ನೀರಿನಂತಾಗಿ, ನಿಮ್ಮ ಅಗತ್ಯವಷ್ಟೇ ಅಲ್ಲದೆ ಸಮಷ್ಟಿಯ ಅವಶ್ಯಕತೆಗಳನ್ನು ಪೂರೈಸುವ ಮಾರ್ಗವನ್ನು ಕಂಡುಕೊಳ್ಳಿರಿ. ಲಯದ ನಂತರದ ಪಯಣವು ಮತ್ತಷ್ಟು ಪಡೆದುಕೊಳ್ಳುವ ಕುರಿತಾಗಿ ಇರುವುದಿಲ್ಲ. ಉದ್ದೇಶಪೂರ್ವಕವಾಗಿ ಬಿಟ್ಟುಕೊಡುವ ಮೂಲಕ ನೀವು ಏನಾಗಬಹುದು, ನಿಮ್ಮನ್ನು ಸೀಮಿತಗೊಳಿಸಿಕೊಳ್ಳುವ ಮೂಲಕ ಹೇಗೆ ಸೇವೆ ಸಲ್ಲಿಸಬಹುದು ಹಾಗು ನೀವು ನಿರಾಕಾರರಾಗಿದ್ದೀರೆಂದು ತಿಳಿದೂ, ನಿಮ್ಮ ಸೀಮಿತ ಆಕಾರವನ್ನು ಸ್ವೀಕರಿಸುವ ಮೂಲಕ ಹೇಗೆ ಪ್ರೀತಿಸಬಹುದು ಎಂದು ಕಂಡುಕೊಳ್ಳುವ ಬಗೆ ಅದು.

ಇದು ಎಲ್ಲ ಪಥಗಳಿಗೂ ಅತೀತವಾದ ಪಥರಹಿತ ಪಥ. ಪಥವನ್ನು ಸೃಷ್ಟಿಸುವುದೆಂದರೆ, ನಿಮ್ಮ ಮೇಲೆ ಸ್ವಾತಂತ್ರ್ಯವನ್ನು ಹೇರುವುದೆಂದರ್ಥ. ಜ್ಞಾನೋದಯದ ನಂತರ, ಮುಂದೇನು ಬರುವುದೆಂದು ಗುರುಗಳನ್ನು ಜನರು ಕೇಳಿದಾಗ ಅವರು ನಸುನಗುತ್ತಾರೆ. ಅವರು ನಿಮಗೆ ನೀರಿನ ಬಟ್ಟಲೊಂದನ್ನು ಕೊಟ್ಟು, ಸಾಧಾರಣದಲ್ಲಿ ಅನಂತವನ್ನು, ಸರಳತೆಯಲ್ಲಿ ಆಳವಾದುದನ್ನು, ಸಾಕು ಎಂದ ಕಡೆ ಸಮಸ್ತವನ್ನು ಹುಡುಕಲು, ಪರ್ಯಾಪ್ತದಲ್ಲಿ ಪೂರ್ಣವನ್ನು ಹುಡುಕುವ ಸಾರವನ್ನು ನೀವು ಕಂಡುಕೊಳ್ಳಲೆಂದು ಬಿಟ್ಟು ನಿಮಗಾಗಿ ಕಾಯುತ್ತಾರೆ.

ಆ ಅರಿವಿನಲ್ಲಿ ಅತ್ಯದ್ಭುತವಾದ ಬದಲಾವಣೆ ಸಂಭವಿಸುತ್ತದೆ: ಸಾಧಾರಣವಾದುದು ಪವಿತ್ರವಾಗುವುದಿಲ್ಲ, ಆದರೆ ಅದು ಮೊದಲಿನಿಂದಲೂ ಹಾಗೆಯೆ ಇದ್ದಿತೆಂದು ನೀವು ಕಡೆಗೆ ಕಂಡುಕೊಳ್ಳುವಿರಿ. ನೀರು ಎಂದಿನಿಂದಲೂ ಪವಿತ್ರವಾಗಿತ್ತು. ಅದನ್ನು ಕಾಣುವುದು ಹೇಗೆಂದು ನಾವು ಕಲಿಯುವ ಅಗತ್ಯವಿತ್ತು, ಅಷ್ಟೆ.

ಗುರು ಮಹಾತ್ಮರಲ್ಲಿ ಪ್ರಾರ್ಥನೆಗಳೊಂದಿಗೆ,
ಕಮಲೇಶ್

ಸಾಧಾರಣವಾದುದು ಪವಿತ್ರವಾಗುವುದಿಲ್ಲ,
ಆದರೆ ಅದು ಮೊದಲಿನಿಂದಲೂ ಹಾಗೆಯೆ
ಇದ್ದಿತೆಂದು ನೀವು ಕಡೆಗೆ ಕಂಡುಕೊಳ್ಳುವಿರಿ.
ನೀರು ಎಂದಿನಿಂದಲೂ ಪವಿತ್ರವಾಗಿತ್ತು. ಅದನ್ನು
ಕಾಣುವುದು ಹೇಗೆಂದು ನಾವು ಕಲಿಯುವ
ಅಗತ್ಯವಿತ್ತು, ಅಷ್ಟೆ.

